**ವಿದೇಶದಲ್ಲಿ ವೈದ್ಯಕೀಯ ಚಿಕಿತ್ಸೆಗಾಗಿ ವಿದೇಶೀ ವಿನಿಮಯದ ಬಿಡುಗಡೆಯಲ್ಲಿ ಉದಾರೀಕರಣ**

**ಎ.ಪಿ (ಡಿಐಆರ್ ಶ್ರೇಣಿ) ಸುತ್ತೋಲೆ ಸಂಖ್ಯೆ 17 (ಸೆಪ್ಟೆಂಬರ್ 12, 2002)**

**ಭಾರತೀಯ ರಿಸರ್ವ್ ಬ್ಯಾಂಕ್**
**ವಿದೇಶೀ ವಿನಿಮಯ ನಿಯಂತ್ರಣ ಇಲಾಖೆ**
**ಕೇಂದ್ರ ಕಚೇರಿ**
**ಮುಂಬೈ-400001.**

ಎ.ಪಿ. (ಡಿಐಆರ್ ಶ್ರೇಣಿ) ಸುತ್ತೋಲೆ ಸಂಖ್ಯೆ 17 ಸೆಪ್ಟೆಂಬರ್ 12, 2002

ಗೆ,

ವಿದೇಶೀ ವಿನಿಮಯ ವ್ಯವಹಾರದಲ್ಲಿ ತೊಡಗಿರುವ ಎಲ್ಲ ಅಧಿಕೃತ ವ್ಯಾಪಾರಿಗಳು.

ಮಾನ್ಯರೇ,

**ವಿದೇಶದಲ್ಲಿ ವೈದ್ಯಕೀಯ ಚಿಕಿತ್ಸೆಗಾಗಿ ವಿದೇಶೀ ವಿನಿಮಯದ ಬಿಡುಗಡೆಯಲ್ಲಿ ಉದಾರೀಕರಣ**

ಜಿ.ಎಸ್.ಆರ್. 381 (ಇ) ದಿನಾಂಕ ಮೇ 3, 2000 ಇದರ ಖಖಖನೇ ಅನುಸೂಚಿಯ ಬಾಬು ಸಂಖ್ಯೆ 9ರ ಕಡೆಗೆ ಅಧಿಕೃತ ವ್ಯಾಪಾರಿಗಳ ಗಮನವನ್ನು ಸೆಳೆಯಲಾಗಿದೆ. ಅದರ ಅನ್ವಯ, ಭಾರತದಲ್ಲಿನ ವೈದ್ಯ ಅಥವಾ ವಿದೇಶದಲ್ಲಿನ ಆಸ್ಪತ್ರೆ/ ವೈದ್ಯ ನೀಡಿದ ಅಂದಾಜನ್ನು ಹಾಜರುಪಡಿಸುವುದರ ಮೇಲೆ ವಿದೇಶದಲ್ಲಿ ವೈದ್ಯಕೀಯ ಚಿಕಿತ್ಸೆಗೆ ತಗಲುವ ವೆಚ್ಚವನ್ನು ಭರಿಸಲು ನಿವಾಸಿಗಳಿಗೆ ವಿದೇಶೀ ವಿನಿಮಯವನ್ನು ಬಿಡುಗಡೆ ಮಾಡುವುದಕ್ಕೆ ಅವರಿಗೆ ಅಧಿಕಾರ ನೀಡಲಾಗಿದೆ.

2. ವೈದ್ಯಕೀಯ ಚಿಕಿತ್ಸೆಗೆ ವಿದೇಶೀ ವಿನಿಮಯವನ್ನು ಯಾವುದೇ ಅಡಚಣೆಗಳಿಲ್ಲದೆ ಮತ್ತು ಯಾವುದೇ ಸಮಯ ನಷ್ಟ ಮಾಡಿಕೊಳ್ಳದೆ ಪಡೆದುಕೊಳ್ಳಲು ನಿವಾಸಿಗಳಿಗೆ ಸಾಧ್ಯವಾಗುವಂತೆ ಮಾಡುವ ದೃಷ್ಟಿಯಿಂದ, ಅಧಿಕೃತ ವ್ಯಾಪಾರಿಗಳು ಯಾವುದೇ ಅಂದಾಜನ್ನು ಒಂದು ಆಸ್ಪತ್ರೆಯಿಂದ/ ವೈದ್ಯನಿಂದ ಪಡೆದು ಒದಗಿಸುವಂತೆ ಒತ್ತಾಯಿಸದೆ ವಿದೇಶದಲ್ಲಿ ವೈದ್ಯಕೀಯ ಚಿಕಿತ್ಸೆಗಾಗಿ 50000 ಅಮೇರಿಕಾ ಡಾಲರ್ ಅಥವಾ ಅದಕ್ಕೆ ಸಮನಾದ ಮೊಬಲಗಿನವರೆಗೆ ವಿದೇಶೀ ವಿನಿಮಯವನ್ನು ಬಿಡುಗಡೆ ಮಾಡಬಹುದೆಂದು ಈಗ ನಿರ್ಧರಿಸಲಾಗಿದೆ.

3. ಅದರಂತೆ, ಅರ್ಜಿದಾರನು, ಭಾರತದ ಹೊರಗೆ ವೈದ್ಯಕೀಯ ಚಿಕಿತ್ಸೆಗಾಗಿ ತಾನು ವಿದೇಶೀ ವಿನಿಮಯವನ್ನು ಖರೀದಿಸುತ್ತಿದ್ದೇನೆಂದು ನೀಡಿದ ಘೋಷಣೆಯ ಆಧಾರದ ಮೇಲೆ ಅಧಿಕೃತ ವ್ಯಾಪಾರಿಗಳು, ಭಾರತದ ಹೊರಗೆ ವೈದ್ಯಕೀಯ ಚಿಕಿತ್ಸೆಗಾಗಿ 50000 ಅಮೇರಿಕಾ ಡಾಲರ್ ಅಥವಾ ಅದಕ್ಕೆ ಸಮಾನವಾದ ಮೊಬಲಗಿನವರೆಗೆ ವಿದೇಶೀ ವಿನಿಮಯವನ್ನು ಬಿಡುಗಡೆ ಮಾಡಬಹುದು. ಆದರೆ, ವಿದೇಶೀ ವಿನಿಮಯವನ್ನು ಖರೀದಿಸುವುದಕ್ಕೆ ಮಾಡುವ ಹಣ ಸಂದಾಯವನ್ನು ಚೆಕ್

ಮೂಲಕ ಮಾಡಬೇಕು ಅಥವಾ ಅರ್ಜಿದಾರನ ಖಾತೆಗೆ ಖರ್ಚು ಹಾಕಬೇಕು ಅಥವಾ ಡಿಮ್ಯಾಂಡ್ ಡ್ರಾಫ್ಟ್ ಮೂಲಕ ಮಾಡಬೇಕು.

4. ಅಧಿಕೃತ ವ್ಯಾಪಾರಿಗಳು ಸುತ್ತೋಲೆಯ ಒಳಾಂಶಗಳನ್ನು ತಮ್ಮ ಸಂಬಂಧಪಟ್ಟ ಘಟಕಗಳ ಗಮನಕ್ಕೆ ತರತಕ್ಕದ್ದು.

5. ಈ ಸುತ್ತೋಲೆಯಲ್ಲಿ ಅಡಕವಾಗಿರುವ ನಿರ್ದೇಶನಗಳನ್ನು ವಿದೇಶೀ ವಿನಿಮಯ ನಿರ್ವಹಣೆ ಅಧಿನಿಯಮ, 1999 (1999ರ 42) ರ ಪ್ರಕರಣ 10 (4) ಮತ್ತು ಪ್ರಕರಣದ 11 (1) ರ ಅಡಿಯಲ್ಲಿ ನೀಡಲಾಗಿದೆ.

ತಮ್ಮ ವಿಶ್ವಾಸಿ,

(ಗ್ರೇಸ್ ಕೋಶಿ)
ಮುಖ್ಯ ಪ್ರಧಾನ ವ್ಯವಸ್ಥಾಪಕರು.